# ಅಶ್ವಿನ್ ನಕ್ಷತ್ರ!




‘ಸ್ಪರ್ಧೆಯ ಶ್ರೇಷ್ಠರು ಯಾರು? ವಿರಾಟ್ ಕೊಹ್ಲಿ ಹಾಗೂ ಸ್ಟೀವ್ ಸ್ಮಿತ್. ಕೊಹ್ಲಿ ಎದುರು ನಾನು ಸೆಣಸಲು ಸಾಧ್ಯವಿಲ್ಲ. ಅದಕ್ಕೇ ಸ್ಟೀವ್ ಸ್ಮಿತ್ ಅವರನ್ನು ಆರಿಸಿಕೊಂಡೆ’ – ಆಸ್ಟ್ರೇಲಿಯಾ ವಿರುದ್ಧ ಸಿಡ್ನಿ ಟೆಸ್ಟ್‌ನಲ್ಲಿ ಕಷ್ಟಪಟ್ಟು ಡ್ರಾ ಮಾಡಿಕೊಳ್ಳಲು ಆಡಿದ ಮೇಲೆ ರವಿಚಂದ್ರನ್ ಅಶ್ವಿನ್ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ್ದರು. ಸ್ಮಿತ್ ಇವತ್ತೂ ಅಶ್ವಿನ್ ಎದುರು ಆಡಲು ತಡಕಾಡುತ್ತಾರೆ. ಅವರ ವಿಕೆಟ್ ಪಡೆಯುವುದೇ ಶ್ರೇಷ್ಠತೆಯ ದಾರಿ ಎಂದು ಸದ್ಯಕ್ಕೆ ಭಾವಿಸಿಯೇ ಅಶ್ವಿನ್ ಬೌಲ್ ಮಾಡುತ್ತಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಹನ್ನೊಂದು ವರ್ಷ ಹಳಬರಾದ ಅಶ್ವಿನ್‌ಗೆ ಈಗ 34ರ ಪ್ರಾಯ. ಹೊಟ್ಟೆಯ ಸ್ನಾಯುವಿನಲ್ಲಿ ನೋವು ಇಟ್ಟುಕೊಂಡೇ ಬೌಲ್ ಮಾಡಿದ ಮೇಲೂ ಟೀಕಾಕಾರರು ಹೀಗೆ ಮಾಡಬೇಕಿತ್ತು, ಹಾಗೆ ಮಾಡಬೇಕಿತ್ತು ಎಂದಾಗ ಅವರು ನೊಂದುಕೊಂಡಿದ್ದಿದೆ. ರವೀಂದ್ರ ಜಡೇಜಾ ಆಲ್‌ರೌಂಡರ್ ರೂಪದಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಕಾಲಿಟ್ಟ ಮೇಲೆ ಅವರೊಟ್ಟಿಗೆ ವಿನಾಕಾರಣ ಸ್ಪರ್ಧಿಸಿಯೇ ಸ್ಥಾನ ಪಡೆಯಬೇಕಾದ ವಿಚಿತ್ರ ಸನ್ನಿವೇಶವೂ ಅವರಿಗೆ ಎದುರಾಗಿದೆ. ಒಂದು ವೇಳೆ ರವೀಂದ್ರ ಜಡೇಜಾ ಗಾಯಗೊಳ್ಳದೇ ಇದ್ದಿದ್ದರೆ ಆಸ್ಟ್ರೇಲಿಯಾದ ನೆಲದಲ್ಲಿ ಎಲ್ಲ ಟೆಸ್ಟ್‌ಗಳನ್ನೂ ಆಡುವ ಅವಕಾಶ ಸಿಗುತ್ತಿತ್ತೋ ಇಲ್ಲವೋ ಎನ್ನುವ ಅನುಮಾನ ಖುದ್ದು ಅಶ್ವಿನ್‌ಗೇ ಇತ್ತು.

2010ರಲ್ಲಿ ಅಶ್ವಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಿದ್ದು. 2011ರಲ್ಲಿ ವಿಶ್ವಕಪ್ ಕ್ರಿಕೆಟ್ ತಂಡದ ಸದಸ್ಯರಾದದ್ದು, ವೆಸ್ಟ್ ಇಂಡೀಸ್ ಎದುರು ಮೊದಲ ಪ್ರವಾಸದಲ್ಲೇ ಟೆಸ್ಟ್‌ನಲ್ಲಿ ಶತಕ ಗಳಿಸಿ ಬ್ಯಾಟ್ ಮೇಲಕ್ಕೆತ್ತಿದ್ದು, 2013ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಭಾರತ ಎತ್ತಿಹಿಡಿಯುವಲ್ಲಿ ಮಹತ್ವದ ಪಾತ್ರ ವಹಿಸಿ 5 ಪಂದ್ಯಗಳಲ್ಲಿ 8 ವಿಕೆಟ್ ಪಡೆದದ್ದು, 2016ರಲ್ಲಿ ಅತಿ ಹೆಚ್ಚು ಸರಣಿ ಸರ್ವೋತ್ತಮ ಪ್ರಶಸ್ತಿ ಗಳಿಸಿದ್ದ ವೀರೇಂದ್ರ ಸೆಹ್ವಾಗ್ ದಾಖಲೆಯನ್ನು ಟೆಸ್ಟ್‌ನಲ್ಲಿ ದಾಟಿದ್ದು, ಚಿಕ್ಕಪ್ರಾಯದಲ್ಲೇ ಅರ್ಜುನ ಪ್ರಶಸ್ತಿ ಗಳಿಸಿದ್ದು... ಹೀಗೆ ಅಶ್ವಿನ್ ಕ್ರಿಕೆಟ್ ಬದುಕಿನ ಪುಟಗಳನ್ನು ತಿರುವಿದಷ್ಟೂ ದಾಖಲೆಗಳು ತೆರೆದುಕೊಳ್ಳುತ್ತಾ ಹೋಗುತ್ತವೆ.

ಅಶ್ವಿನ್ ತಮ್ಮ ಹೆಸರಿನೊಟ್ಟಿಗೇ ಅಪ್ಪನ ಹೆಸರನ್ನೂ ಸೇರಿಸಿಕೊಂಡಿದ್ದಾರೆ. ಅವರ ತಂದೆ ರವಿಚಂದ್ರನ್ ಕ್ಲಬ್ ಕ್ರಿಕೆಟ್‌ನಲ್ಲಿ ವೇಗದ ಬೌಲಿಂಗ್ ಮಾಡುತ್ತಿದ್ದರು. ಮಗ ಕೂಡ ಕ್ರಿಕೆಟಿಗನಾಗಬೇಕು ಎನ್ನುವುದು ಅವರ ಸಹಜ ಕನಸು. ಚೆನ್ನೈನ ಸೇಂಟ್ ಬೆಡೇಸ್ ಆಂಗ್ಲೋ ಇಂಡಿಯನ್ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಕಲಿಯುವಾಗ ಸಿ.ಕೆ. ವಿಜಯ್ ಹಾಗೂ ಚಂದ್ರ ಎಂಬಿಬ್ಬರು ತರಬೇತುದಾರರು ಅಶ್ವಿನ್ ಕ್ರಿಕೆಟ್ ಉತ್ಸಾಹವನ್ನು ಗುರುತಿಸಿ, ನೀರೆರೆದರು. ಎಸ್‌ಎಸ್‌ಎನ್